## ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
## KARNATAKA LEGISLATIVE ASSEMBLY, RESEARCH AND REFERENCE BRANCH

### ಪತ್ರಿಕಾ ತುಣುಕುಗಳು
### PAPER CLIPPINGS

3

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 31/1/2021

# ಕಲಾಪಕ್ಕೆ ಮೊಬೈಲ್ ನಿರ್ಬಂಧ ಚಿಂತನೆ

**ಚಿಕ್ಕಮಗಳೂರು:** ಮೇಲ್ಮನೆಯಲ್ಲಿ ಮೊಬೈಲ್ ನಿರ್ಬಂಧಿಸುವ ಬಗ್ಗೆ ಸಭಾಪತಿಯೊಂದಿಗೆ ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಳ್ಳುವುದಾಗಿ ವಿಧಾನ ಪರಿಷತ್ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿ, "ಕಲಾಪದಲ್ಲಿ ಸದಸ್ಯರು ಮೊಬೈಲ್ ನೋಡಿರುವ ಮಾಹಿತಿಯ ಅರಿವಿದೆ. ಕಲಾಪದೊಳಗೆ ಮೊಬೈಲ್ ರಿಂಗ್ ಕಿರಿಕಿರಿ ತರಬಾರದು ಎಂದು ಜಾಮರ್ ಹಾಕಲಾಗಿದೆ. ಹೀಗಾಗಿ ಹೊರ ಮತ್ತು ಒಳಬರುವ ಕರೆ ಸ್ವೀಕರಿಸಲಾಗದು," ಎಂದರು. ದಾಂಧಲೆ ಪ್ರಕರಣ ಸಂಬಂಧ ಕೆಲ ಸದಸ್ಯರ ಕಲಾಪ ನಿರ್ಬಂಧ ಶಿಫಾರಸು ಬಗ್ಗೆ ಪ್ರತಿಕ್ರಿಯಿಸಿ, "ಈ ರೀತಿ ಮಾಡಬೇಕು ಎಂದು ಕಾಂಗ್ರೆಸ್‌ನವರು ಯೋಚನೆ ಮಾಡಿದ್ದರು ಎಂಬ ಗಾಳಿ ಮಾತು ಹರಿದಾಡಿವೆ. ಅದಕ್ಕೆ ನಮ್ಮ ಕಡೆಯಿಂದಲೂ ತಯಾರಿ ನಡೆದಿತ್ತು. ಘಟನೆ ಬಗ್ಗೆ ಪೂರ್ಣ ಪ್ರಮಾಣದ ತನಿಖೆಯಾದ ನಂತರ ಸದನದಲ್ಲಿ ಮಂಡಿಸಲಾಗುತ್ತದೆ," ಎಂದರು.